# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 366 |
| ಸದಸ್ಯರ ಹೆಸರು | : | ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 16.02.2023. |
| ಉತ್ತರಿಸುವವರು | : | ಮಾನ್ಯ ಮುಖ್ಯಮಂತ್ರಿ ರವರು. |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕೋವಿಡ್ ಕರ್ತವ್ಯ ನಿರ್ವಹಿಸುವ ಸಂದರ್ಭದಲ್ಲಿ ಕೋವಿಡ್ ಖಾಯಿಲೆಗೆ ತುತ್ತಾಗಿ ಮರಣ ಹೊಂದಿದ ರಾಜ್ಯ ಸರ್ಕಾರದ ವಿವಿಧ ಇಲಾಖೆಯ ನೌಕರರಿಗೆ ಸರ್ಕಾರವೇ ಪರಿಹಾರ ನೀಡಿದ್ದು, ಅದೇ ರೀತಿ ಕೋವಿಡ್ ಕಾಯಿಲೆಗೆ ತುತ್ತಾಗಿ ಮರಣ ಹೊಂದಿದ ಗ್ರಾಮ ಪಂಚಾಯತಿ ನೌಕರರಿಗೆ ಪರಿಹಾರ ಬಿಡುಗಡೆ ಮಾಡಲಾಗಿದೆಯೇ: ಇಲ್ಲದಿದ್ದಲ್ಲಿ, ಕಾರಣಗಳನ್ನು ತಿಳಿಸುವುದು: | 2020 ರ ಕೋವಿಡ್ ಸಂದರ್ಭದಲ್ಲಿ ಗ್ರಾಮ ಪಂಚಾಯತ್ ಸಿಬ್ಬಂದಿಗಳು ಕೋವಿಡ್ ನಿಯಂತ್ರಣಕ್ಕಾಗಿ ಶ್ರಮಿಸುತ್ತಿದ್ದ ವೇಳೆ ಕೋವಿಡ್ ಸೋಂಕಿನಿಂದ ಮೃತಪಟ್ಟ ಸಂದರ್ಭದಲ್ಲಿ ಸರ್ಕಾರವು ಅವರಿಗೆ ರೂ. 30.00 ಲಕ್ಷ ಪರಿಹಾರ ಘೋಷಿಸಿತ್ತು. ಘೋಷಿಸಲಾದ ಪರಿಹಾರ ಪಾವತಿಗೆ ಪ್ರತ್ಯೇಕ ಲೆಕ್ಕ ಶೀರ್ಷಿಕೆ ಇರಲಿಲ್ಲ. ಈ ಉದ್ದೇಶಕ್ಕಾಗಿ ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಆಶ್ವಾಸನೆ ನಿಧಿಯನ್ನು ಸ್ಥಾಪಿಸಿ ಪರಿಹಾರ ನೀಡಲು ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 179 ಜಿಪಿಎಸ್ 2021, ದಿನಾಂಕ:28-06-2021 ರಲ್ಲಿ ತಿಳಿಸಲಾಗಿದೆ. |
| (ಆ) | ಕೋವಿಡ್ ನಿರ್ವಹಣೆ ಸಂದರ್ಭದಲ್ಲಿ ಕೋವಿಡ್ ಖಾಯಿಲೆಗೆ ತುತ್ತಾಗಿ ಮರಣ ಹೊಂದಿದ ಗ್ರಾಮ ಪಂಚಾಯತಿ ನೌಕರರ ಸಂಖ್ಯೆ ಎಷ್ಟು: ಇವರಿಗೆ ಬಿಡುಗಡೆಯಾಗಬೇಕಾದ ಪರಿಹಾರ ಮೊತ್ತವೆಷ್ಟು: ಪರಿಹಾರ ಬಿಡುಗಡೆ ಮಾಡದಿದ್ದಲ್ಲಿ, ಮರಣ ಹೊಂದಿದ ನೌಕರರ ಕುಟುಂಬಗಳಿಗೆ ಪರಿಹಾರ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು: (ಮಾಹಿತಿ ನೀಡುವುದು) | ಕೋವಿಡ್ ನಿರ್ವಹಣೆ ಸಂದರ್ಭದಲ್ಲಿ ಕೋವಿಡ್ ಖಾಯಿಲೆಗೆ ತುತ್ತಾಗಿ ಮರಣ ಹೊಂದಿದ ಗ್ರಾಮ ಪಂಚಾಯತಿ ನೌಕರರ ಸಂಖ್ಯೆ:74, ಪ್ರತಿಯೊಬ್ಬರಿಗೆ ಬಿಡುಗಡೆ ಮಾಡಬೇಕಾಗಿರುವ ಪರಿಹಾರ ಮೊತ್ತ ರೂ.30.00 ಲಕ್ಷಗಳು.<br><br>ಬೀದರ್ ಜಿಲ್ಲೆಯಲ್ಲಿ 3 ನೌಕರರ ಅವಲಂಬಿತರಿಗೆ ತಲಾ ರೂ. 2635913/- ಗಳನ್ನು ವಿತರಿಸಲಾಗಿದ್ದು, ಇನ್ನುಳಿದ ರೂ. 364087/- ಗಳನ್ನು ಆಶ್ವಾಸನಾ ನಿಧಿಯಲ್ಲಿ ಅನುದಾನ ಸಂಗ್ರಹಣೆಯಾದ ನಂತರ ವಿತರಿಸಲಾಗುವುದು.<br><br>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಬ್ಬ ನೌಕರ ಮರಣ ಹೊಂದಿದ್ದು, ಪರಿಹಾರದ ಮೊತ್ತ ಮಂಜೂರು ಮಾಡಲು ಪ್ರಮಾಣ ಪತ್ರ ನೀಡಲು ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯವರಿಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಪ್ರಮಾಣ ಪತ್ರ ಸ್ವೀಕೃತವಾದ ನಂತರ ಪರಿಹಾರ ಮೊತ್ತ ಬಿಡುಗಡೆ ಮಾಡಲಾಗುವುದು.<br><br>ಕಲಬುರಗಿ ಜಿಲ್ಲೆಯಲ್ಲಿ ಒಬ್ಬ ನೌಕರರ ಪ್ರಕರಣದ ಕುರಿತು ಅಪರ ಜಿಲ್ಲಾಧಿಕಾರಿ ಸಮಿತಿಯ ಪರಿಶೀಲನೆಯಲ್ಲಿದೆ.<br><br>ಮೈಸೂರು ಜಿಲ್ಲೆಯಲ್ಲಿ ಇಬ್ಬರು ನೌಕರರ ನೇಮಕಾತಿ ಅನುಮೋದನೆಯಾಗದಿರುವುರಿಂದ ಪರಿಹಾರ ವಿತರಿಸಿರುವುದಿಲ್ಲ.<br><br>ವಿವರವನ್ನು ಅನುಬಂಧದಲ್ಲಿ ನೀಡಿದೆ.<br><br>ಬಾಕಿ ಇರುವ ಪರಿಹಾರ ಮೊತ್ತವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳುವಂತೆ ಎಲ್ಲಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. |

| | | |
|---|---|---|
| (ಇ) | ಕೋವಿಡ್ ನಿರ್ವಹಣೆ ಸಂದರ್ಭದಲ್ಲಿ ಕೋವಿಡ್ ಖಾಯಿಲೆಗೆ ತುತ್ತಾಗಿ ಮರಣ ಹೊಂದಿದ ಗ್ರಾಮ ಪಂಚಾಯತಿ ನೌಕರರ ಕುಟುಂಬಗಳಿಗೆ ಗ್ರಾಮ ಪಂಚಾಯತಿ ತೆರಿಗೆ ಹಣದಲ್ಲಿ ಪರಿಹಾರ ನೀಡಲು ಸರ್ಕಾರ ಕ್ರಮ ಕೈಗೊಂಡಿದೆಯೇ? (ಮಾಹಿತಿ ನೀಡುವುದು) | ಗ್ರಾಮ ಪಂಚಾಯತ್ ನೌಕರರು ಕೋವಿಡ್-19 ಕರ್ತವ್ಯ ನಿರ್ವಹಿಸುತ್ತಿದ್ದಾಗ ಕೋವಿಡ್-19 ಸಾಂಕ್ರಾಮಿಕದಿಂದಾಗಿ ಮರಣ ಹೊಂದಿದ್ದಲ್ಲಿ ಅವರ ಕುಟುಂಬದವರಿಗೆ ಪರಿಹಾರ ನೀಡಲು ಅಥವಾ ಕೋವಿಡ್-19 ಸಾಂಕ್ರಾಮಿಕದಿಂದಾಗಿ ಅನಾರೋಗ್ಯಗೊಂಡಲ್ಲಿ ಸದರಿ ಚಿಕಿತ್ಸೆಗಾಗಿ ತಗಲುವ ವೈದ್ಯಕೀಯ ವೆಚ್ಚ ಭರಿಸಲು ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಆಶ್ವಾಸನೆ ನಿಧಿಯನ್ನು ಸ್ಥಾಪಿಸಿ ಪರಿಹಾರ ನೀಡಲು ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 179 ಜಿಪಿಎಸ್ 2021, ದಿನಾಂಕ:28-06-2021 ರಲ್ಲಿ ತಿಳಿಸಲಾಗಿದೆ.<br><br>ಅದರಲ್ಲಿ ಗ್ರಾಮ ಪಂಚಾಯತಿಗಳಿಗೆ ಅವರ ವಾರ್ಷಿಕ ತೆರಿಗೆ ಬೇಡಿಕೆ ಆಧಾರದ ಮೇಲೆ ವಂತಿಗೆಯನ್ನು ವಾರ್ಷಿಕವಾಗಿ ನಿಗಧಿಪಡಿಸಿದೆ. ಗ್ರಾಮ ಪಂಚಾಯತಿ ನೌಕರರ ಕ್ಷೇಮಾಭಿವೃದ್ಧಿಗಾಗಿ ಆಶ್ವಾಸನಾ ನಿಧಿಯನ್ನು ಸ್ಥಾಪಿಸಲಾಗಿದೆ ಹಾಗೂ ಈ ನಿಧಿಗೆ ಗ್ರಾಮ ಪಂಚಾಯತಿಗಳ ಸಾಮರ್ಥ್ಯಾನುಸಾರ ವಂತಿಗೆ ನೀಡಲು ತಿಳಿಸಲಾಗಿದೆ. |

ಸಂಖ್ಯೆ: ಗ್ರಾಅಪ 99 ಗ್ರಾಪಂಅ 2023

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

**ಕರ್ನಾಟಕ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಸ್ ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:366 ಕ್ಕೆ ಅನುಬಂಧ**

| ಕ್ರ.ಸಂಖ್ಯೆ | ಜಿಲ್ಲೆಯ ಹೆಸರು | ಕೋವಿಡ್ ಕಾಯಿಲೆಗೆ ತುತ್ತಾಗಿ ಮರಣ ಹೊಂದಿರುವ ನೌಕರರ ಸಂಖ್ಯೆ | ಪರಿಹಾರ ಹಣ ಬಿಡುಗಡೆಯಾಗಿರುವ ನೌಕರರ ಸಂಖ್ಯೆ | ಪರಿಹಾರ ಹಣ ಬಿಡುಗಡೆಯಾಗದೇ ಇರುವ ನೌಕರರ ಸಂಖ್ಯೆ | ಪರಿಹಾರ ಹಣ ಬಿಡುಗಡೆ ಮಾಡದಿದ್ದಲ್ಲಿ ಯಾವಾಗ ಬಿಡುಗಡೆ ಮಾಡಲಾಗುವುದು | ಷರಾ |
|---|---|---|---|---|---|---|
| ಬೆಂಗಳೂರು ವಿಭಾಗ | | | | | | |
| 1 | ಬೆಂಗಳೂರು ಗ್ರಾಮಾಂತರ | 4 | 4 | 0 | 0 | |
| 2 | ಬೆಂಗಳೂರು ನಗರ | 5 | 5 | 0 | 0 | |
| 3 | ಚಿಕ್ಕಬಳ್ಳಾಪುರ | 5 | 5 | 0 | 0 | |
| 4 | ಚಿತ್ರದುರ್ಗ | 3 | 3 | 0 | 0 | |
| 5 | ದಾವಣಗೆರೆ | 0 | 0 | 0 | 0 | |
| 6 | ಕೋಲಾರ | 2 | 2 | 0 | 0 | |
| 7 | ರಾಮನಗರ | 2 | 2 | 0 | 0 | |
| 8 | ಶಿವಮೊಗ್ಗ | 1 | 1 | 0 | 0 | |
| 9 | ತುಮಕೂರು | 2 | 2 | 0 | 0 | |
| ಬೆಳಗಾವಿ ವಿಭಾಗ | | | | | | |
| 10 | ಬಾಗಲಕೋಟೆ | 2 | 2 | 0 | 0 | |
| 11 | ಬೆಳಗಾವಿ | 7 | 7 | 0 | 0 | |
| 12 | ಧಾರವಾಡ | 2 | 2 | 0 | 0 | |
| 13 | ಗದಗ | 1 | 1 | | | |
| 14 | ಹಾವೇರಿ | 1 | 1 | 0 | 0 | |
| 15 | ಉತ್ತರ ಕನ್ನಡ | 0 | 0 | 0 | 0 | |
| 16 | ವಿಜಯಪುರ | 4 | 4 | 0 | 0 | |
| ಕಲಬುರಗಿ ವಿಭಾಗ | | | | | | |
| 17 | ಬಳ್ಳಾರಿ | 1 | 1 | 0 | 0 | |
| 18 | ವಿಜಯನಗರ | 2 | 2 | 0 | 0 | |
| 19 | ಬೀದರ್ | 3 | 0 | 3 | | 03 ಸಿಬ್ಬಂದಿಗಳ ಅವಲಂಬಿತರಿಗೆ ತಲಾ ರೂ.26,35,913/- ಗಳನ್ನು ವಿತರಿಸಲಾಗಿದ್ದು, ಇನ್ನುಳಿದ ರೂ.3,64,087/- ಗಳನ್ನು ಆಶ್ವಾಸನಾ ನಿಧಿಯಲ್ಲಿ ಅನುದಾನ ಸಂಗ್ರಹಣೆ ಆದ ನಂತರ ವಿತರಿಸಲಾಗುವುದು. |
| 20 | ಕಲಬುರಗಿ | 5 | 4 | 1 | | ಒಂದು ಪ್ರಕರಣದ ಕುರಿತು ಎಡಿಸಿ ಕಮಿಟಿಯ ಪರಿಶೀಲನೆಯಲ್ಲಿರುತದೆ. |
| 21 | ಕೊಪ್ಪಳ | 0 | 0 | 0 | 0 | |
| 22 | ರಾಯಚೂರು | 2 | 2 | 0 | 0 | |
| 23 | ಯಾದಗಿರಿ | 4 | 4 | 0 | 0 | |
| ಮೈಸೂರು ವಿಭಾಗ | | | | | | |
| 24 | ಚಾಮರಾಜನಗರ | 1 | 1 | 0 | 0 | |
| 25 | ಚಿಕ್ಕಮಗಳೂರು | 2 | 2 | 0 | 0 | |
| 26 | ದಕ್ಷಿಣ ಕನ್ನಡ | 1 | 0 | 1 | | ಕೋವಿಡ್-19ನಿಂದ ಮರಣ ಹೊಂದಿದ ಬಗ್ಗೆ ಪ್ರಸ್ತಾವನೆಯು ಮುಲ್ಕಿ ತಾಲ್ಲೂಕು ಪಂಚಾಯತಿಯಿಂದ ದಿನಾಂಕ:20-12-2022ರಂದು ಸ್ವೀಕೃತವಾಗಿರುತ್ತದೆ. ಪರಿಹಾರದ ಮೊತ್ತ ಮಂಜೂರಾತಿ ಕುರಿತು ನಿಯಮಾನುಸಾರ ಪ್ರಮಾಣ ಪತ್ರವನ್ನು ನೀಡುವಂತೆ ಜಿಲ್ಲಾಧಿಕಾರಿಯವರಿಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಪ್ರಮಾಣ ಪತ್ರ ಸ್ವೀಕೃತವಾದ ಕೂಡಲೇ ಪರಿಹಾರ ಮೊತ್ತ ಬಿಡುಗಡೆಗೆ ಕ್ರಮವಹಿಸಲಾಗುವುದು. |
| 27 | ಹಾಸನ | 4 | 4 | 0 | 0 | |
| 28 | ಕೊಡಗು | 1 | 1 | 0 | 0 | |
| 29 | ಮಂಡ್ಯ | 2 | 2 | 0 | 0 | |
| 30 | ಮೈಸೂರು | 4 | 2 | 2 | | 02 ಗ್ರಾ.ಪಂ. ಸಿಬ್ಬಂದಿಗಳ ಅನುಮೋದನೆಯಾಗದಿರುವುದರಿಂದ ಪರಿಹಾರ ವಿತರಿಸಿರುವುದಿಲ್ಲ. |
| 31 | ಉಡುಪಿ | 1 | 1 | 0 | 0 | |
| | | 74 | 67 | 7 | 0 | |